

ಹಿಡಿಯಲು ಅನುಕೂಲವಾಗುತ್ತಿದೆ. ಈ ಎಮ್ಮೆಗಳು ಚಿಲಿಕಾ ಸರೋವರದ ಕೆಸರು ನೀರಿನಲ್ಲಿ ಉರುಳಾಡಿ, ಓಡಾಡಿ ನೀರು ಗಬ್ಬಡ ಮಾಡುವುದರಿಂದ ಹುಳ, ಹುಪ್ಪಟ್ಟೆ, ಪುಡಿ ಮೀನುಗಳು ಹಾರಿ ಬರುತ್ತವೆ. ಇವನ್ನೆಲ್ಲಾ ಹಿಡಿದು ಮುಕ್ಕಲು ಪಕ್ಷಿಗಳು ಅವ್ವನ ಹಿಂದೆ ತಿಂಡಿಗೆ ಪೀಡಿಸಿ ಅಲೆಯುವ ಮಕ್ಕಳಂತೆ ಸುತ್ತುತ್ತಾ ಇರುತ್ತವೆ. ಇಲ್ಲಿನ ಪ್ರಾಣಿಗಳು, ಮನುಷ್ಯರು, ಪಕ್ಷಿಗಳು, ಮೀನುಗಳು, ಒಬ್ಬರನ್ನೊಬ್ಬರು ಪರಸ್ಪರ ಅವಲಂಬಿಸಿ ಬದುಕು ಕಟ್ಟಿಕೊಂಡಿದ್ದಾರೆ.

ಚಿಲಿಕಾ ಸರೋವರ ನ್ಯೂ ಕ್ಯಾಲೆಡೋನಿಯನ್ ಬ್ಯಾರಿಯರ್ ರೀಫ್ ನಂತರ ವಿಶ್ವದ ಅತಿದೊಡ್ಡ ಉಪ್ಪುನೀರಿನ ಸರೋವರ ಎನಿಸಿದೆ. ನೂರಾ ಅರವತ್ತು ಪ್ರಜಾತಿಯ ವಲಸೆ ಪಕ್ಷಿಗಳ ಆತಿಥ್ಯವನ್ನು ವಹಿಸುತ್ತದೆ. ವಲಸೆಯ ಋತುವಿನಲ್ಲಿ ಕ್ಯಾಸ್ಪಿಯನ್ ಸಮುದ್ರ, ಬೈಕಲ್ ಸರೋವರ, ಅರಲ್ ಸಮುದ್ರ ಮತ್ತು ರಷ್ಯಾ, ಕಝಾಕಿಸ್ತಾನ್, ಮಧ್ಯ ಮತ್ತು ಆಗ್ನೇಯ ಏಷ್ಯಾ, ಲಡಾಕ್, ಹಿಮಾಲಯದ ಕಿರ್ಗಿಜ್ ಹುಲ್ಲುಗಾವಲುಗಳಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ಕೆಲವೊಂದು ಪಕ್ಷಿಗಳು ಚಿಲಿಕಾ ಸರೋವರವನ್ನು ತಲುಪಲು ಹನ್ನೆರಡು ಸಾವಿರ ಕಿಲೋಮೀಟರ್‌ಗಳಷ್ಟು ಸುದೀರ್ಘ ಪ್ರಯಾಣ ಮಾಡುತ್ತವೆ.

ಈ ತಾಣವು ದಯಾ ನದಿಯ ಉಪನದಿಯಾದ ಮಲಗುನಿ ನದಿಯ ಎಡದಂಡೆಯಲ್ಲಿದೆ. ನಾಲ್ಕನೇ ಶತಮಾನದ ದಂತಕಥೆಯ ಪ್ರಕಾರ, ದರೋಡೆಕೋರ ರಾಜ ರಕ್ತಬಾಹುವು ಪುರಿಯ ಮೇಲೆ ಬೃಹತ್ ಹಡಗುಗಳೊಂದಿಗೆ ದಾಳಿ ಮಾಡಲು ಯೋಜಿಸಿದನು. ರಹಸ್ಯವಾಗಿ ಯಾರ ಕಣ್ಣಿಗೂ ಕಾಣದಂತೆ, ಸಮುದ್ರಕ್ಕೆ ಲಂಗರು ಹಾಕಿದನು. ದಡದಲ್ಲಿ ತೇಲುತ್ತಿದ್ದ ಹಡಗುಗಳ ಕಸ ಕಂಡ ಜನ ಹೆದರಿ ಪಟ್ಟಣ ಬಿಟ್ಟು ತಮ್ಮ ಎಲ್ಲಾ ಆಸ್ತಿಯೊಂದಿಗೆ ತಪ್ಪಿಸಿಕೊಂಡರು. ರಕ್ತಬಾಹು ಜನರು ತೊರೆದುಹೋದ ಪಟ್ಟಣವನ್ನು ಕಂಡು ಕ್ರೋಧಗೊಂಡನು. ತನಗೆ ದ್ರೋಹ ಮಾಡಿದ ಸಮುದ್ರವನ್ನು ತನ್ನ ಕೋಪದಿಂದ ಇಬ್ಭಾಗ ಮಾಡಿದನು. ಸೈನ್ಯ ನಗರವನ್ನು ಪ್ರವೇಶಿಸಿ ಏನೂ ಸಿಗದೆ ಹಿಂತಿರುಗುವಾಗ ಸೀಳಿದ ಸಮುದ್ರ ಮತ್ತೆ ಮೊದಲಿನಂತಾಗಿ ಸೈನ್ಯವನ್ನೂ, ರಕ್ತಬಾಹುವನ್ನು ಮುಳುಗಿಸಿ ಚಿಲಿಕಾ ಸರೋವರ ಸೃಷ್ಟಿ ಆಯಿತೆಂದು ಇಲ್ಲಿನ ಜನ ನಂಬುತ್ತಾರೆ.

ನಾವಿದ್ದ ಮೂರು ದಿನವೂ ಹಕ್ಕಿ ಕೊಲ್ಲುವ ದಂಧೆಯಿಂದ ಮುಕ್ತರಾಗಿ ಪಕ್ಷಿ ತಜ್ಞರಾಗಿ ಬದಲಾದ ಹಳ್ಳಿಯ ಜನರೊಂದಿಗೆ ಛಾಯಾಗ್ರಹಣ ಮಾಡಿದೆವು. ಈಗಿಲ್ಲಿ ಕೊಲ್ಲುವ ಮಾತಿಲ್ಲ. ತಮಗೆ ಅನ್ನ, ನೀರು, ಹೊದಿಕೆ ಕೊಟ್ಟ ರೆಕ್ಕೆಪುಕ್ಕದ ಹಾರುಜೀವಗಳಿಗೆ ರಕ್ಷಿಸುವ, ಗೌರವಿಸುವ ಭಾವವಿದೆ. ಪ್ರತಿ ಹಕ್ಕಿಯನ್ನೂ ಪ್ರೀತಿಸುವ, ಗೌರವದಿಂದ ಜತನ ಮಾಡುವ ಈ ಹಳ್ಳಿಯ ಜನ ನಿಜವಾದ ಪಕ್ಷಿಪ್ರೇಮಿಗಳಾಗಿ ಬದಲಾಗಿದ್ದಾರೆ. ಇವರನ್ನು ಈ ಮಟ್ಟಿಗೆ ಬದಲಾಯಿಸಿದ ಪಕ್ಷಿಪ್ರೇಮಿ ಸಂಘದವರೂ ಖುಷಿಯಾಗಿದ್ದಾರೆ. ●